

# ಪಕ್ಷಪಾತದ ಚರ್ಚೆ

ಸ್ವಜನ ಪಕ್ಷಪಾತದ ಚರ್ಚೆ ಬಾಲಿವುಡ್‌ನಲ್ಲಿ ಈ ವಾರವೂ ಮುಂದುವರಿದಿದೆ. ಸುಶಾಂತ್ ಸಿಂಗ್ ಆತ್ಮಹತ್ಯೆಯ ಬೆನ್ನಲ್ಲಿ ಶುರುವಾದ ಈ ಚರ್ಚೆಯ ಇನ್ನೊಂದು ಮಗ್ಗಲು ಈಗ ಬಿಚ್ಚಿಕೊಳ್ಳುತ್ತಿದೆ. ಬಾಲಿವುಡ್ ತಾರೆಯರು ತಮ್ಮ ಪ್ರಭಾವದ ಬಲದಿಂದ ಮಕ್ಕಳನ್ನು ಸಿನಿಮಾಕ್ಕೆ ತಂದರೂ ಪ್ರತಿಭೆ ಮತ್ತು ಅದೃಷ್ಟ ಇಲ್ಲದಿದ್ದರೆ ಆ ಸಿನಿಮಾ ಗೆಲ್ಲುವ ಖಾತ್ರಿಯಿಲ್ಲ ಎನ್ನುವುದು ತಾರೆಯರ ಮಕ್ಕಳ ಅಂಬೋಣ. ಅದಕ್ಕೆ ಉದಾಹರಣೆಯಾಗಿ ಅವರು ನೀಡುವುದು ನಿರ್ಮಾಪಕ ಹ್ಯಾರಿ ಬವೇಜಾರ ಮಗ ಹರ್ಮನ್ ಬವೇಜಾ ನಟಿಸಿದ ಲವ್‌ಸ್ಟೋರಿ 2050 ಮತ್ತು ವಾಟ್ ಯುವರ್ ರಾಶೀ ಚಿತ್ರಗಳು. ಎರಡೂ ನೆಲಕಚ್ಚಿದ್ದವು. ಆ ಬಳಿಕ ಆದಿತ್ಯ ಪಾಂಚೋಲಿ ತನ್ನ ಮಗ ಸೂರಜ್ ಪಾಂಚೋಲಿ, ಸುನಿಲ್ ಶೆಟ್ಟಿ ತನ್ನ ಮಗಳು ಅಥಿಯಾ ಶೆಟ್ಟಿ, ಶೇಖರ್ ಸುಮನ್ ತನ್ನ ಮಗ ಅಧ್ಯಯನ್ ಸುಮನ್‌ನನ್ನು ತೆರೆಗೆ ತಂದು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾಗಿವೆ. ಅಥಿಯಾ ಶೆಟ್ಟಿಯ ಆರಂಗೇಟ್ರಂಗೆ ಸಲ್ಮಾನ್ ಖಾನ್ ಬೆಂಬಲ ಇದ್ದದ್ದೂ ನೆರವಿಗೆ ಬರಲಿಲ್ಲ. 'ಕೇವಲ ಕುಟುಂಬದ ಬೆಂಬಲ ಇದ್ದರೆ ಸಾಲುವುದಿಲ್ಲ. ಕಠಿಣ ಪರಿಶ್ರಮ ಮತ್ತು ಅದೃಷ್ಟದ ಬೆಂಬಲವೂ ಬೇಕು' ಎನ್ನುವುದು ತಾರಾಪುತ್ರರ ಹೇಳಿಕೆ. ಅನುಪಮ್ ಖೇರ್ ಮಗ ಸಿಕಂದರ್ ಖೇರ್, ಮೊಹ್ನಿಶ್ ಬೆಹ್ಲ್ ಮಗಳು ಪ್ರನೂತನ್, ಮಹೇಶ್ ಭಟ್ ಮಗಳು ಅಲಿಯಾ ಭಟ್ ಮುಂತಾದವರು ಈ ಹೇಳಿಕೆಯನ್ನು ಪ್ರತ್ಯೇಕ ಸಂದರ್ಶನಗಳಲ್ಲಿ ಪ್ರತಿಪಾದಿಸಿದ್ದಾರೆ.

# ಹೃತಿಕ್ ಜಾದೂ



ಹೃತಿಕ್ ರೋಷನ್ ಮತ್ತೆ ಸೂಪರ್ ಹೀರೋ ಆಗುವ ಸಿದ್ಧತೆ ನಡೆಸಿದ್ದಾನೆ. 'ಕ್ರಿಶ್ 4' ಚಿತ್ರದ ಪೂರ್ವಸಿದ್ಧತೆಗಳು ಆರಂಭವಾಗಿವೆ. ಕ್ರಿಶ್ ಸರಣಿಯಲ್ಲಿ ಬಂದ ಎಲ್ಲ ಚಿತ್ರಗಳೂ ಹೃತಿಕ್ ಸೂಪರ್‌ಹೀರೊ ಇಮೇಜ್ ನೀಡಿದ್ದು ಸುಳ್ಳಲ್ಲ. ಈಗ ಅದರ ಮುಂದಿನ ಭಾಗ. 2003ರಲ್ಲಿ ತೆರೆಗೆ ಬಂದ ಹೃತಿಕ್ ನಟಿಸಿದ 'ಕೊಯಿ ಮಿಲ್ ಗಯಾ' ಚಿತ್ರದಲ್ಲಿ ಅನ್ಯಗ್ರಹದಿಂದ ಬಂದ ಜೀವಿಯೊಂದು (ಜಾದೂ) ಹೃತಿಕ್‌ಗೆ ಜೊತೆಯಾಗಿತ್ತು. ಈಗ 'ಕ್ರಿಶ್ 4' ಚಿತ್ರಕ್ಕೆ ಅದೇ ಅನ್ಯಗ್ರಹ ಜೀವಿಯನ್ನು ಮರಳಿ ಕರೆತರಲಿದ್ದಾರಂತೆ ಚಿತ್ರದ ನಿರ್ದೇಶಕ ರಾಕೇಶ್ ರೋಶನ್. ಅದಕ್ಕೆ ತಕ್ಕಂತೆ ಅವರು ಚಿತ್ರಕಥೆಯನ್ನು ರಚಿಸಿಯೂ ಆಗಿದೆಯಂತೆ. ಹೀರೋಯಿನ್ ತಲಾಷ್ ನಡೆದಿದೆಯಂತೆ. ಆದರೆ ಈ ಹಿಂದೆ ಚಿತ್ರದಲ್ಲಿ ನಟಿಸಿದ್ದ ಪ್ರಿಯಾಂಕಾ ಚೋಪ್ರಾ ಈ ಚಿತ್ರದಲ್ಲಿ ನಟಿಸುತ್ತಿಲ್ಲ ಎನ್ನುವುದು ಖಾತ್ರಿಯಾಗಿದೆಯಂತೆ.

ಅಂದ ಹಾಗೆ ಈ ಚಿತ್ರದಲ್ಲಿ ಹೃತಿಕ್‌ಗೆ ಶಾರೂಕ್ ಖಾನ್ ಬೆಂಬಲ ಇದೆಯಂತೆ. ಚಿತ್ರದಲ್ಲಿ ಶಾರೂಕ್ ಯಾವುದೇ ಪಾತ್ರ ವಹಿಸುತ್ತಿಲ್ಲ. ಬದಲಾಗಿ ಶಾರೂಕ್ ಒಡೆತನದ ರೆಡ್ ಚಿಲ್ಲೀಸ್ ಎಂಟರ್‌ಟೈನ್‌ಮೆಂಟ್ ಕಂಪನಿ ಕ್ರಿಶ್ 4 ಚಿತ್ರಕ್ಕೆ ವಿಶುವಲ್ ಎಫೆಕ್ಟ್ ನೀಡಲಿದೆ. ಈ ಕುರಿತು ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಬಿದ್ದಿದೆ. ಚಿತ್ರದ ಥೀಮ್ ಹಾಡಿನ ಸಹಿತ ಇತರ ಹಾಡುಗಳಿಗೆ ಸಂಗೀತ ಸಂಯೋಜಿಸುವ ಕೆಲಸವನ್ನು ಸಂಗೀತ ನಿರ್ದೇಶಕ ರಾಜೇಶ್ ರೋಶನ್ ಆರಂಭಿಸಿ ಆಗಿದೆಯಂತೆ. ವೆಲ್ ಕಮ್ ಟು ಜಾದೂ!

# ಕೋವಿಡ್ ಇನ್ಶೂರೆನ್ಸ್

ಕೋವಿಡ್ ಜೊತೆ ಬದುಕುವುದನ್ನು ಬಾಲಿವುಡ್ ಕಲಿತುಕೊಳ್ಳಲು ಆರಂಭಿಸಿದೆ. ತಾಪ್ಸೀ ಪನ್ನೂ ನಟಿಸಲಿರುವ ಹೊಸ ಚಿತ್ರ 'ಲೂಪ್ ಲಪೇಟಾ' ಚಿತ್ರಕ್ಕೆ ಕೋವಿಡ್ 19 ಇನ್ಶೂರೆನ್ಸ್ ರಕ್ಷೆಯನ್ನು ಒದಗಿಸಲಾಗಿದೆ! ಬಾಲಿವುಡ್‌ನಲ್ಲಿ ಕೋವಿಡ್– 19ನಿಂದ ಇನ್ಶೂರೆನ್ಸ್ ಅಭಯ ಪಡೆಯಲಿರುವ ಮೊದಲ ಚಿತ್ರ ಇದಾಗಿದೆ. ಚಿತ್ರದ ನಿರ್ಮಾಪಕರಾದ ಅತುಲ್ ಕಸ್ಬೇಕರ್ ಮತ್ತು ತನುಜ್ ಗರ್ಗ್ ಈ ಕುರಿತು ವಕೀಲರ ಜೊತೆಗೂ ಚರ್ಚಿಸಿದ್ದಾರಂತೆ.

1998ರಲ್ಲಿ ಸೂಪರ್ ಹಿಟ್ ಆದ ಜರ್ಮನ್ ಚಿತ್ರ 'ರನ್ ಲೋಲಾ ರನ್ನ' ಹಿಂದಿ ರಿಮೇಕ್ 'ಲೂಪ್ ಲಪೇಟಾ'. ಚಿತ್ರದ ನಾಯಕ ತಾಹಿರ್ ರಾಜ್ ಭಾಸಿನ್. 'ಈ ಹಿಂದೆ ತಾರೆಯರ ಅನಾರೋಗ್ಯ, ಸೆಟ್‌ನಲ್ಲಿ ಅನಾಹುತ ಮುಂತಾದವುಗಳನ್ನು ಇನ್ಶೂರೆನ್ಸ್ ಕವರ್ ಮಾಡುತ್ತಿತ್ತು. ಈಗ ಕೋವಿಡ್ 19ರ ಆಘಾತವನ್ನೂ ಇನ್ಶೂರೆನ್ಸ್ ಕವರ್ ಮಾಡಲಿದೆ' ಎನ್ನುವುದು ನಿರ್ಮಾಪಕರ ಮಾತು. ಏಪ್ರಿಲ್ ಮೇನಲ್ಲಿ ಚಿತ್ರದ ಶೂಟಿಂಗ್ ಮುಗಿಯಬೇಕಿತ್ತು. ಈಗ ಕೋವಿಡ್‌ನಿಂದಾಗಿ ಮುಂದಕ್ಕೆ ಹೋಗಿದೆ. ಪರಿಸ್ಥಿತಿ ಸುಧಾರಿಸಿದ ತಕ್ಷಣ ಮುಂಬೈ ಮತ್ತು ಗೋವಾದಲ್ಲಿ ಶೂಟಿಂಗ್ ಶುರುವಾಗಲಿದೆಯಂತೆ.

■ ಬಿಂದು